ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 320/2014

ಪ್ರಾಸಾ – 4

ಚಾಸಾ – 7

**ಸಾಕ್ಷಿಯು ದಿಃ 04.04.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಜೆ.ಎ.ಕುಮಾರ್ |
| ತಂದೆಯ ಹೆಸರು | : | ಲೇ. ಬಿ.ಕೆ.ಜಯರಾಮ್ |
| ವಯಸ್ಸು | : | 68 ವರ್ಷ |
| ವೃತ್ತಿ | : | ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ |
| ವಾಸಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ನಾನು ದಿಃ 04.12.2008 ರಿಂದ 31.12.2010 ರವರೆಗೆ ಬಂಡಿಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28.07.2013 ರಂದು ದಾಖಲಿಸಿರುವ ದೋಷಾರೋಪಣೆಗೆ ಮುನ್ನ ಸಾಕ್ಷ್ಯದ ಹೇಳಿಕೆಯನ್ನು ಪರಿಗಣಿಸಬಹುದಾಗಿರುತ್ತದೆ ಎಂದು ಸಾಕ್ಷಿ ಮತ್ತು ಮಾನ್ಯ ಎಪಿಪಿ ರವರು ಕೋರಿರಿರುತ್ತಾರೆ. ಆರೋಪಿಗಳ ಪರ ವಕೀಲರು ಸಹ ಸಮ್ಮತಿ ಸೂಚಿಸಿರುವುದರಿಂದ ದೋಷಾರೋಪಣೆಗೆ ಮುನ್ನ ದಾಖಲಿಸಿದ ಸಾಕ್ಷ್ಯವನ್ನೇ ಪರಿಗಣಿಸಲಾಗಿರುತ್ತದೆ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ದಿನಾಂಕ 16.12.2010 ರಂದು ನಾನು ಚಾಸಾ 5 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರದಿ ದಾಖಲಿಸುವ ಮುಂಚೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ಅಡಿಯಲ್ಲಿ ನ್ಯಾಯಾಲಯದ ಮುಂದೆ ಖಾಸಗಿ ಫಿರ್ಯಾದನ್ನು ದಾಖಿಸಿರುವುದಿಲ್ಲ. ದಿನಾಂಕ 30.11.2008 ರಂದು ಸ್ಥಳ ಮಹಜರ್ ನ್ನು ಜರುಗಿಸಿದ್ದೆಯಾದರೆ ಆ ದಿನವೆ ನ್ಯಾಯಾಲಯಕ್ಕೆ ಅದನ್ನು ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತನಿಖೆ ಪೂರ್ಣಗೊಂಡಿಲ್ಲದ ಕಾರಣ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಆ ದಿನ ಯಾವುದೇ ಪಂಚನಾಮೆ ಜರುಗಿಸದ ಕಾರಣ ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಮತ್ತು ಕೇರಳ ಅರಣ್ಯ ಅಧಿಕಾರಿಗಳ ಮಾತು ಕೇಳಿ ಅವರ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಾವು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಅರಣ್ಯ ಅಧಿಕಾರಿಗಳು ವಾಹನದಲ್ಲಿ ಗಸ್ತು ಮಾಡುತ್ತಾರೆ ಎಂದರೆ ಸಾಕ್ಷಿಯು ಕೆಳ ಹಂತದ ಸಿಬ್ಬಂದಿಗಳು ನಡೆದುಕೊಂಡು ಗಸ್ತು ಮಾಡುತ್ತಾರೆ ಎಂದು ನುಡಿಯುತ್ತಾರೆ.

3. ಅರಣ್ಯದಲ್ಲಿ ಮಾಂಸಹಾರಿ ಪ್ರಾಣಿಗಳು ಇತರ ಪ್ರಾಣಿಗಳನ್ನು ಕೊಂದು ತಿಂದು ಎಳೆದುಕೊಂಡು ಹೋಗಿ ಶೇಖರಣೆ ಮಾಡಿಕೊಳ್ಳುತ್ತವೆ ಎಂದರೆ ಸರಿ. ದೊಡ್ಡ ಪ್ರಾಣಿಗಳು ಸಣ್ಣ ಪ್ರಾಣಿಗಳನ್ನು ಹೊಡೆದು ತಿಂದು ಉಳಿದ ಮಾಂಸವನ್ನು ಸಣ್ಣ ಪುಟ್ಟ ಪ್ರಾಣಿಗಳು ತಿನ್ನುತ್ತವೆ ಮತ್ತು ಶೇಖರಿಸಿಕೊಳ್ಳುತ್ತವೆ ಎಂದರೆ ಸರಿ. ಪ್ರಾಣಿಗಳನ್ನು ಕೊಂದು ತಿಂದು ಉಳಿದ ಮಾಂಸ ಸಮಯ ಕಳೆದಂತೆ ತಾಜಾ ಸ್ಥಿತಿಯನ್ನು ಕಳೆದುಕೊಂಡು ಕೊಳೆಯಲು ಪ್ರಾರಂಭಿಸುತ್ತದೆ ಎಂದರೆ ಸರಿ. ಕೇರಳ ಅರಣ್ಯ ಅಧಿಕಾರಿಗಳು ಮದ್ದೂರು ಅರಣ್ಯಕ್ಕೆ ಭೇಟಿಕೊಟ್ಟ ಬಗ್ಗೆ ದಾಖಲೆಗಳು ಇರುವುದಿಲ್ಲ, ಆದರೆ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿದ್ದೇವೆ. ಆ ದಿನ ಆರೋಪಿಗಳು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ಕನ್ನಡ ಬರುವುದಿಲ್ಲ ಎಂದರೆ ಸರಿ. ನಿಪಿ 6 ರಿಂದ 9 ಸ್ವಇಚ್ಛಾ ಹೇಳಿಕೆಗಳಲ್ಲಿ ಆರೋಪಿಗರು ಮಳಿಯಾಳಂ ಭಾಷೆಯಲ್ಲಿ ಹೇಳಿದನ್ನು ತರ್ಜುಮೆ ಮಾಡಿಸಿ ದಾಖಲಿಸಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಪ್ರೇಮದಾಸ್ ಮುಖಾಂತರ ಭಾಷಾಂತರ ಮಾಡಿಸಿದ್ದೇವೆ ಎಂದು ಹೇಳಲಾದ ಪ್ರೇಮದಾಸ್ ಮೂಲತಃ ಕೇರಳ ದವರು

ಎಂದರೆ ಸರಿ. ಸದರಿ ಪ್ರೇಮದಾಸ್ ರವರ ಮಾತೃ ಭಾಷೆ ಮಳಿಯಾಳಂ ಎಂದರೆ ಸರಿ. ಹಾಗಾಗಿ ಪ್ರೇಮದಾಸ್ ರವರಿಗೆ ಕನ್ನಡ ಭಾಷೆಯ ಮೇಲೆ ಹಿಡಿತ ಇರಲಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮಲ್ಲಿ ನೌಕರರಾಗಿದ್ದು ಅವರಿಗೆ ಕನ್ನಡ ಬರುತ್ತಿತ್ತು ಎಂದು ನುಡಿಯುತ್ತಾರೆ. ಪ್ರೇಮದಾಸ್ ರವರು ನುರಿತ ಭಾಷಾಂತರಕಾರರಲ್ಲ ಎಂದರೆ ಸರಿ.

4. ನ್ಯಾಯಾಲಯದಿಂದ ಬಾಡಿ ವಾರೆಂಟ್ ಪಡೆದ ನಂತರ ಆರೋಪಿಗಳನ್ನು ನಮ್ಮ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಹೋಗಿ ಕೇರಳ ಜೈಲ್ ನಿಂದ ಕರೆದುಕೊಂಡು ಬಂದಿರುತ್ತಾರೆ, ಆ ದಿನಾಂಕವನ್ನು ದಾಖಲೆ ನೋಡಿ ಹೇಳಬೇಕಾಗುತ್ತದೆ. ಅರಣ್ಯ ಪ್ರದೇಶದಲ್ಲಿ ಒಮ್ಮೆ ಸ್ಥಳವನ್ನು ನೋಡಿದ ಹೊಸ ವ್ಯಕ್ತಿ ಮತ್ತೆ ಕೆಲವು ದಿನ ಕಳೆದ ನಂತರ ಹೋಗಿ ಅದೇ ಸ್ಥಳವನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಗುಂಡ್ಲುಪೇಟೆ ಮತ್ತು ಸುಲ್ತಾನ್ ಭತೇರಿ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿತ್ತು ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಾತ್ರಿ 9.00 ರಿಂದ ಬೆಳಿಗ್ಗೆ 6.00 ರವರೆಗೆ ವಾಹನಗಳು ಓಡಾಡಲು ಅನುಮತಿ ಇಲ್ಲ ಎಂದರೆ ಸಾಕ್ಷಿಯು ಘಟನೆಯಾದ ಸಮಯದಲ್ಲಿ ನಿರ್ಭಂದ ಇರಲಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳ ಕ್ಕೂ ನಮ್ಮ ಕಛೇರಿಗೂ 2 ರಿಂದ 3 ಕಿ.ಮೀ ಅಂತರ ಇರುತ್ತದೆ. ರಾತ್ರಿ ಸಮಯದಲ್ಲಿ ನಮ್ಮ ಸಿಬ್ಬಂದಿಗಳು ಗಸ್ತಿನಲ್ಲಿ ಇರುತ್ತಾರೆ ಎಂದರೆ ಸರಿ. ಕೃತ್ಯ ನಡೆದ ಸ್ಥಳದಿಂದ ಕೇರಳದಲ್ಲಿ ಆರೋಪಿಗಳಿಂದ ಜಿಂಕೆ ಮಾಂಸ ವಶಪಡಿಸಿಕೊಂಡಿದ್ದೇವೆ ಎನ್ನುವ ಸ್ಥಳಕ್ಕೆ ಹೋಗಲು ಮದ್ದೂರು ಚೆಕ್ ಪೋಸ್ಟ್ ಮೂಲೆ ಹೊಳೆ ಚೆಕ್ ಪೋಸ್ಟ್ ಮತ್ತು ಮುತ್ತಂಗ ಚೆಕ್ ಪೋಸ್ಟ್ ದಾಟಿ ಹೋಗಬೇಕು ಎಂದರೆ ಸರಿ. ಸದರಿ 3 ಚೆಕ್ ಪೋಸ್ಟ್ ಗಳಲ್ಲಿಯೂ ವಾಹನಗಳನ್ನು ತಪಾಸಣೆ ಮಾಡಿಯೇ ಕಳುಹಿಸಲಾಗುತ್ತದೆ ಎಂದರೆ ಸರಿ. ನಾವು ಹೇಳುವಂತೆ ಕೃತ್ಯ ನಡೆದಿದ್ದೆಯಾದರೆ ಆರೋಪಿಗಳು ಸದರಿ ಚೆಕ್ ಪೋಸ್ಟ್ ನಲ್ಲಿ ಪರಿಶೀಲಿಸಿದಾಗ ಸಿಕ್ಕಿ ಬಿಳುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿಗಳು ಚೆಕ್ ಪೋಸ್ಟ್ ರವರನ್ನು ಯಾಮಾರಿಸಿ ಹೋಗಿರಬಹುದು, ನಾನು ಹೇಗೆ ಹೇಳಲಿ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ಕೃತ್ಯ ನಡೆಯದ ಕಾರಣ ಆರೋಪಿಗಳು ಸದರಿ ಚೆಕ್ ಪೋಸ್ಟ್ ಗಳಲ್ಲಿ ಸಿಕ್ಕಿಲ್ಲ ಮತ್ತು ಕೇರಳ ಅರಣ್ಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ರಾತ್ರಿ ವೇಳೆ ಅರಣ್ಯದಲ್ಲಿ ನಿಶ್ಯಬ್ದ ಇದ್ದು ಸಣ್ಣ ಶಬ್ಧವಾದರು ಕೇಳಿಸುತ್ತದೆ ಎಂದರೆ ಸರಿ. ಆ ದಿನ ರಾತ್ರಿ ಸಮಯದಲ್ಲಿ ಶಬ್ಧವಾದ ಬಗ್ಗೆ ನಮ್ಮ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಸೂಚಿಸಿರುವುದಿಲ್ಲ. ಸಾಮನ್ಯಾವಾಗಿ 5–10 ನಿಮಿಷ ಒಂದು ವಾಹನವನ್ನು ಅರಣ್ಯದ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದರೆ ನಮಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮುದ್ದೆ ಮಾಲುಗಳನ್ನು ಆರೋಪಿಗಳಿಂದ ನಾವು ವಶಪಡಿಸಿಕೊಂಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಕೇರಳ ಅರಣ್ಯ ಅಧಿಕಾರಿಗಳು ನಮಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮುದ್ದೆ ಮಾಲುಗಳನ್ನು ಕೇರಳ ಅರಣ್ಯ ಅಧಿಕಾರಿಗಳು ಸೃಷ್ಟಿ ಮಾಡಿಕೊಂಡು ನಮಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಜಿಂಕೆ ಮಾಂಸದಲ್ಲಿ ಗುಂಡು ಪತ್ತೆಯಾಗಿರುವುದಿಲ್ಲ. 2ನೇ ಆರೋಪಿಯ ಮನೆಯಲ್ಲಿ ಜಿಂಕೆ ಮಾಂಸವನ್ನು ಕತ್ತರಿಸುವಾಗ ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿ ಮನೆ 2ನೇ ಆರೋಪಿಗೆ ಸೇರಿದ್ದು ಎಂಬುದರ ಬಗ್ಗೆ ದಾಖಲೆ ನೋಡಿಲ್ಲ, ಅದನ್ನು ಕೇರಳ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಸದರಿ ಮನೆ 2ನೇ ಆರೋಪಿಗೆ ಸೇರಿದಲ್ಲ ಎಂದರೆ ಸರಿಯಲ್ಲ.

6 ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಕೇರಳ ಅರಣ್ಯ ಸಿಬ್ಬಂಧಿಗಳಿಂದ ಯಾವುದೇ ಮುದ್ದೆ ಮಾಲುಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದೇವೆ ಎನ್ನಲಾದ ಬಿಳಿ ಅಂಬಾಸಿಡರ್ ಕಾರ್ 1ನೇ ಆರೋಪಿಗೆ ಸೇರಿದ್ದಾಗಿರುತ್ತದೆ ಎಂದು ಕೇರಳ ಅರಣ್ಯ ಅಧಿಕಾರಿಗಳ ದಾಖಲೆಯಿಂದ ನನಗೆ ತಿಳಿದಿರುತ್ತದೆ. ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಮತ್ತು ಕಚ್ಚಾ ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡಿದ್ದೇವೆ ಎನ್ನಲಾದ ಜಿಂಕೆಯ ಕಾಲುಗಳು ಇನ್ನು ತಾಜಾ ಸ್ಥಿತಿಯಲ್ಲಿದ್ದವು. ಜಿಂಕೆಯ ಎರಡೂ ಕಾಲುಗಳು ಒಂದೇ ಸ್ಥಳದಲ್ಲಿ ಸಿಕ್ಕಿಲ್ಲ ಎಂದರೆ ಸಾಕ್ಷಿಯು ಅಲ್ಲಿಯೇ ಅಕ್ಕಪಕ್ಕ ಬಿಸಾಡಿದ್ದರು ಎಂದು ನುಡಿಯುತ್ತಾರೆ. ವಶಪಡಿಸಿಕೊಂಡಿದ್ದಃವೆ ಎನ್ನಲಾದ ಕರಳು ಇಂತಹದೇ ಪ್ರಾಣಿಯದ್ದು ಎಂದು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು, ನಮ್ಮ ಸಿಬ್ಬಂದಿಗಳು ಅದರಲ್ಲಿ ಪರಿಣಿತರಿದ್ದು ಅವರು ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ನಿಪಿ 23 ರಿಂದ 29 ದಾಖಲೆಗಳಲ್ಲಿ ಆರೋಪಿಗಳ ಸಹಿ ಇಲ್ಲ ಎಂದರೆ ಸರಿ. ಆ ದಿನ ನಿಪಿ 23 ರಂತೆ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡದ ಕಾರಣ ಅದಕ್ಕೆ

ಆರೋಪಿಗಳ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 5 ಮರಿಲಿಂಗೆಗೌಡ ರವರು ಮೃತಪಟ್ಟಿರುತ್ತಾರೆ. ಚಾಸಾ 5 ರವರ ಸಹಿಯ ಆಧಾರದ ಮೇಲೆ ದಾಖಲೆಗಳ ವಿಚಾರ ಹೇಳುತ್ತಿದ್ದೇನೆ ಹೊರತು ಅವರು ಕೈಗೊಂಡಿರುವ ತನಿಖಾ ಕ್ರಮದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅವರು ಸಕ್ಷಮ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಬಗ್ಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ 5 ರವರು ಕೇರಳ ಅರಣ್ಯ ಅಧಿಕಾರಿಗಳಿಂದ ಯಾವುದೇ ದಾಖಲೆಗಳನ್ನು ಪಡೆದಿಲ್ಲ ಮತ್ತು ಭಾಷಾಂತರ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಕೃತ್ಯ ನಡೆಯದೇ ಇದ್ದರೂ ಸಹ ಕೇರಳ ಅರಣ್ಯ ಅಧಿಕಾರಿಗಳ ಮಾತು ಕೇಳಿ ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೂ ಆರೋಪಿಗಳಿಗೂ ಸಂಬಂಧ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ